ಹಾಗೆ ಆಯಿತು ಎಂದು ಡಿಲೇ ಮಾಡುತ್ತಾರೆ. ಕೋರ್ಟ್‌ಆಂತರ ರೂಪಾಯಿ ಖರ್ಚು ಮಾಡಿ ಲಿಫ್ಟ್ ಇರಿಗೇಷನ್ ಮಾಡಿದ್ದೇವೆ. ನನ್ನ ತಾಲ್ಲೂಕಿನಲ್ಲೇ ನಾಲ್ಕೈದು ಇದೆ. ಚೇಳಗಿರ್ತಾಲ್ಲೂಕಿನಲ್ಲಿದೆ. ಅಫ್ಜಲ್‌ಪುರದಲ್ಲಿದೆ ಆದ್ದರಿಂದ ಈ ಸೀಲಿಂಗ್‌ನಲ್ಲಿ ಬರಬಾರದು ಎಂದು ತಪ್ಪಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದಾರೆ, ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇರತಕ್ಕ ಲ್ಯಾಂಡನ್ನು ನ್ಯಾಷನಲೈಸ್ ಮಾಡಿ ಅವರಿಗೆ ಕಾಂಪನ್‌ಸೇಷನ್ ಕೊಟ್ಟು ಬಡವರಿಗೆ ಹಂಚಿದರೆ ಪ್ರಯೋಜನವಾಗುತ್ತದೆ. ಇಂಥ ಕೇಸ್‌ಗಳನ್ನು ರಿವ್ಯೂ ಮಾಡುತ್ತೀರಾ ? ಅದನ್ನಾದರೂ ದಯವಿಟ್ಟು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ರಿವ್ಯೂ ಮಾಡುವ ಬಗ್ಗೆ ಮೊದಲು ಆಜ್ಞೆ ಇತ್ತು. ಅದರ ಪ್ರಕಾರ ಮಾಡುತ್ತಿದ್ದಾರೆ. ಈಗಲೂ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಪೆಷಲ್ ಡೆಪ್ಯೂಟಿ ಕಮಿಷನರ್ ಇಲ್ಲವಲ್ಲ ಯಾರು ಮಾಡುತ್ತಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಡೆಪ್ಯೂಟಿ ಕಮಿಷನರ್ ಮಾಡುತ್ತಿದ್ದಾರೆ. ಡೆಪ್ಯೂಟಿ ಕಮಿಷನರ್‌ಗೆ ಈಗ ಕೆಲಸ ಕಡಿಮೆ ಇದೆ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಅವರಿಗೆ ಏನೂ ಇಲ್ಲ. ಅವರಿಗೆ ಟೈಮ್ ಸಾಕಷ್ಟಿದೆ. ಡಿವಿಷನಲ್ ಕಮಿಷನರ್ ಲೆವೆಲ್‌ನಲ್ಲಿ ರಿವ್ಯೂ ಮಾಡುತ್ತಿದ್ದಾರೆ. ರಾಜ್ಯ ಮಟ್ಟದಲ್ಲಿ ಪ್ರತಿ ತಿಂಗಳೂ ರಿವ್ಯೂ ಮಾಡಿ ಮಾನಿಟರಿಂಗ್ ಮಾಡುತ್ತಿದ್ದೇವೆ. ಅಲ್ಲದೆ ರಿವಿನ್ಯೂ ಕಮೀಷನರ್ ಸ್ಪೆಷಲ್ ಮಾನಿಟರಿಂಗ್ ಮಾಡುತ್ತಿದ್ದಾರೆ. ಯಾವ ಯಾವ ಟ್ರಿಬ್ಯುನಲ್‌ನಲ್ಲಿ ತಡವಾಗಿದೆ ಕಾರಣ ಏನು ಎಂದು ನೋಡುತ್ತಿದ್ದಾರೆ. ಜಡ್ಜ್‌ಮೆಂಟ್ ಕೂಡ ತರಿಸಿಕೊಂಡು ನೋಡತಕ್ಕ ವ್ಯವಸ್ಥೆ ಇದೆ. ಸ್ಯಾಂಪಲ್ ಎಂದು ೧೦ ಪರ್ಸೆಂಟ್‌ನಷ್ಟು ಜಡ್ಜ್‌ಮೆಂಟನ್ನು ತರಿಸಿ ಟೆನೆಂಟ್ ವಿರಂದ್ದ ಆಗಿರುವುದು ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ ಒಂದು ವೇಳೆ ಸರಿಯಾಗಿ ತೀರ್ಮಾನ ಆಗಿರದಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಇರಿಗೇಷನ್ ಬಗ್ಗೆ ಕೇಳಿದ್ದೀರಿ. ಯಾರು ತಪ್ಪು ಮಾಡುತ್ತಾರೋ ಅವರ ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ೫೦ ಎಕರೆ ಒಣ ಬೇಸಾಯ ಮಾಡುವುದಕ್ಕಿಂತ ೧೦ ಎಕರೆ ನೀರಾವರಿ ಇರುವ ಕಡೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಕೃಷ್ಣಾ ರಿವರ್ ಭಾಗದಲ್ಲಿ ಫರ್ಟೈಲ್ ಲ್ಯಾಂಡ್ ಇರುತ್ತದೆ. ಅಲ್ಲಿ ನಮ್ಮ ಭೂಮಿ ಸವಳಾಗುತ್ತದೆ ಎಂಬ ಭಾವನೆ ಅವರಿಗೆ ಇದೆ. ಏರಡನೆಯದು ಸೀಲಿಂಗ್ ಲಿಮಿಟ್‌ನಲ್ಲಿ ಹೋಗುತ್ತದಲ್ಲ ಎಂಬ ಭಾವನೆ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರೇ ಹಣ ಕೊಟ್ಟು ಲಿಫ್ಟ್ ಇರಿಗೇಷನ್ ಮಾಡಿಕೊಳ್ಳುವುದಕ್ಕೆ ಕೆಲವು ರೈತರು ಮುಂದೆ ಬಂದಿದ್ದಾರೆ.

ರಾಜ್ಯದಲ್ಲಿರುವ ದೇವದಾಸಿಯರ ಬಗ್ಗೆ

೧೨೦೬. **ಶ್ರೀ ಆರ್. ಎಸ್. ನಾಯ್ಕ (ಭಟ್ಕಳ).**—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ದೇವದಾಸಿಯರ ಸಂಖ್ಯೆ ಎಷ್ಟು? (ತಾಲ್ಲೂಕುವಾರು, ಜಿಲ್ಲಾವಾರು ವಿವರ ನೀಡುವುದು)

ಆ) ೧೯೮೫ ರಿಂದ ಈವರೆವಿಗೆ ಗೌರವ ಜೀವನ ನಡೆಸಲು ಅನುಕೂಲ ಮಾಡಿಕೊಡಲಾಗಿರುವ ದೇವದಾಸಿಯರ ಸಂಖ್ಯೆ ಎಷ್ಟು ?

ಇ) ದೇವದಾಸಿಯರಿಗೆ ವಸತಿ ನಿಲಯಗಳನ್ನು ಸ್ಥಾಪಿಸಿರುವ ಸ್ಥಳಗಳಾವುವು ? ಅವುಗಳ ಸಂಖ್ಯೆ ಎಷ್ಟು ?

ಈ) ಕಳೆದ ಮೂರು ವರ್ಷಗಳಲ್ಲಿ ದೇವದಾಸಿಯರ ಪುನರುದ್ಧಾರಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಒಟ್ಟು ೮೮೭೦. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ೨೬ಳಳ

೧) ಬಾಲಕಿಯರ ಪ್ರಮಾಣಿತ ಶಾಲೆ ಸೌಂದತ್ತಿ ೧
ಮಾಹಿಳೆಯರ ರಾಜ್ಯ ನಿಲಯ ಅಥಣಿ ೧
೨

ಈ) ರೂ. ೧೦.೫೬ ಲಕ್ಷ

ಅನುಬಂಧ

೧) ಬಳ್ಳಾರಿ ಜಿಲ್ಲೆ

೧	ಸಂಡೂರು	೧೦೦
೨	ಕೂಡ್ಲಿಗಿ	೬೪೭
೩	ಹರಪನಹಳ್ಳಿ	೨೫೫
೪	ಹಡಗಲಿ	೪೨
೫	ಸಿರಿಗುಪ್ಪ	೨೪
೬	ಹಗರಿಬೊಮ್ಮನಹಳ್ಳಿ	೯೩
		೧೫೦೯

೨) ಬೀದರ್ ಜಿಲ್ಲೆ

೧	ಬೀದರ್ ತಾಲ್ಲೂಕು	೯
೨	ಹುಮನಾಬಾದ್	೯
೩	ಬಸವನಬಾಗೇವಾಡಿ	೨
		೩೦

೩) ಧಾರವಾಡ ಜಿಲ್ಲೆ

೧	ಹೀರೇಕೆರೂರು	೫೮
೨	ಹಾವೇರಿ	೧೧೪
೩	ಸವಣೂರು	೧೭೦
೪	ರೋಣ	೯೦೫
೫	ನವಲಗುಂದ	೧೩೦
೬	ಹಾನಗಲ್	೧೬
೭	ಧಾರವಾಡ	೨೬
೮	ಮುಂಡರಗಿ	೫೦
೯	ಗದಗ್	೨೨೪
೧೦	ಬ್ಯಾಡಗಿ	೨೭
		೧೭೨೪

೪) ಗುಲ್ಬರ್ಗಾ ಜಿಲ್ಲೆ

೧	ಜೇವರ್ಗಿ	೩೨
೨	ಅಫಜಲಪುರ	೫೨
೩	ಆಳಂದ	೭೦
೪	ಚಿತ್ತಾಪುರ	೩೦
೫	ಚಿಂಚೋಳಿ	೨೦
೬	ಶೋರಾಪುರ	೨೪೩
೭	ಯಾದಗಿರಿ	೨೨
		೫೦೯

೫) ಬೆಳಗಾಂ ಜಿಲ್ಲೆ

೧	ಅಥಣಿ	೭೪೪
೨	ಹುಕ್ಕೇರಿ	೫೪೯
೩	ರಾಯಬಾಗ್	೫೩೨
೪	ಚಿಕ್ಕೋಡಿ	೪೯೯
೫	ಗೋಕಾಕ್	೩೫೦
೬	ರಾಮದುರ್ಗ	೩೨೦
೭	ಸವದತ್ತಿ	೧೫೨
೮	ಬೈಲಹೊಂಗಲ	೭೦
೯	ಖಾನಪುರ	೨೯
೧೦	ಬೆಳಗಾಂ	೨೧
		೩,೨೭೭

೬) ರಾಯಚೂರು ಜಿಲ್ಲೆ

೧	ಯಲ್ಬರ್ಗಾ	೨೮೨
೨	ಕುಷ್ಟಗಿ	೧೫೦
		೪೩೨

೭) ಲಿಂಗಸುಗೂರು ತಾಲ್ಲೂಕು

೧	ಮುದಗಲ್	೩೭
೨	ಮಸ್ಕಿ	೫೧
೩	ಕರಡಗಲ್	೩೨
		೧೧೯

೮) ಬಿಜಾಪುರ ತಾಲ್ಲೂಕು

೧	ಬಾದಾಮಿ	೪೫೨
೨	ಜಮಖಂಡಿ	೭೧೦
೩	ಮುದೋಳ್	೫೧
		೧೨೧೩

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೆ, ಬಾಲಕಿಯರ ಪ್ರಮಾಣಿತ ವಸತಿ ಶಾಲೆ ಸೌಂದತ್ತಿಯಲ್ಲಿ ಒಂದು ಇದೆ. ದೇವದಾಸಿಯರ ಸಂಖ್ಯೆಗೆ ಹೋಲಿಸಿದರೆ ವಸತಿ ಶಾಲೆಗಳ ಸಂಖ್ಯೆ ಕಡಿಮೆ ಇದೆ. ಇಲ್ಲಿ ಕೊಟ್ಟಿರುವ ಲಿಸ್ಟ್ ಪ್ರಕಾರ ಆರು ಜಿಲ್ಲೆಯಲ್ಲಿ ದೇವದಾಸಿಯರ ಸಂಖ್ಯೆ ಇದೆ. ಇಷ್ಟು ಸಂಖ್ಯೆಗೆ ಕೇವಲ ೨ ವಸತಿ ಶಾಲೆ ಇದೆ. ಇದು ಸಾಕಾಗುವುದಿಲ್ಲ. ಆದ್ದರಿಂದ ವಸತಿ ಶಾಲೆಗಳ ಸಂಖ್ಯೆಯನ್ನು ೨-೧೦ ಮಾಡುತ್ತೀರೋ ಹೇಗೆ ? ಕಳೆದ ಮೂರು ವರ್ಷಗಳಲ್ಲಿ ದೇವದಾಸಿಯರ ಪುನರುದ್ಧಾರಕ್ಕಾಗಿ ಖರ್ಚು ಮಾಡಿರುವ ಹಣ ೧೦.೫೬ ಲಕ್ಷ ರೂಪಾಯಿಗಳು. ಈ ಹಣ ಏನೇನೂ ಸಾಲದು. ಈ ರಾಜ್ಯದಲ್ಲಿ ದೇವದಾಸಿಯರನ್ನು ಸುಧಾರಣೆ ಮಾಡುವುದಕ್ಕೆ ಕರ್ನಾಟಕ ಸರ್ಕಾರ ಬಹಳ ದೊಡ್ಡ ಕಾರ್ಯಕ್ರಮ ಹೊಂದಿದೆ ಎಂದು ಪೇಪರ್‌ನಲ್ಲಿ ದೊಡ್ಡ ಪ್ರಚಾರ ಬಂದಿದೆ ಎಂದು ಕೇಳಿದೆ. ಆದರೆ ಇವರು ಖರ್ಚು ಮಾಡಿರುವುದು ನೋಡಿದರೆ ಕೇವಲ ೧೦.೫೬ ಲಕ್ಷ ರೂಪಾಯಿಗಳು. ದೇವದಾಸಿಯರ ಸಂಖ್ಯೆ ಸಾವಿರ ಇದೆ. ಇವರಿಗೆ ಪ್ರತಿ ತಲಾ ೨೫ ಸಾವಿರ ರೂಪಾಯಿ ಖರ್ಚು ಮಾಡಿದರೆ ಹೆಚ್ಚಿಚ್ಚು ಅಂದರೆ ಎರಡೂವರೆ ಕೋಟಿ ರೂಪಾಯಿ ಖರ್ಚಾಗ ಬಹುದು. ಈ ರಾಜ್ಯದಲ್ಲಿ ೨-೩ ಕೋಟಿ ರೂಪಾಯಿ ಖರ್ಚು ಮಾಡಿದರೆ ಒಂದೇ ಸಾರಿಗೆ ದೇವದಾಸಿಯರ ಸಮಸ್ಯೆ ಬಗೆಹರಿಯುತ್ತದೆ. ಆ ರೀತಿ ಮೂರು ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ನಿಮ್ಮ ಖಾತೆಯಲ್ಲಿ ವ್ಯವಸ್ಥೆ ಮಾಡಿಕೊಂಡಿದ್ದೀರೋ ಹೇಗೆ? ಮತ್ತು ಅವರಲ್ಲಿ ಎಷ್ಟು ಜನರಿಗೆ ಪೆನ್‌ಶನ್ ಕೊಟ್ಟಿದ್ದೀರಿ ಹಾಗೂ ಗ್ರೀನ್‌ಕಾರ್ಡ್‌ಗಳನ್ನು ಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ಮಾಹಿತಿ ಕೊಡಿ.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಸೌಂದತ್ತಿಯಲ್ಲಿ ಹೆಣ್ಣುಮಕ್ಕಳ ಪ್ರಾಮಾಣಿಕ ಶಾಲೆಯಲ್ಲಿ ೫ ವರ್ಷದಿಂದ ೧೮ವರ್ಷದ ಮಕ್ಕಳಿಗೆ ಶಿಕ್ಷಣ ಮತ್ತು ವೃತ್ತಿಪರ ತರಬೇತಿ

ಕೊಡುತ್ತಿದ್ದೇವೆ, ಅಮೇಲೆ ಅಥಣಿಯಲ್ಲಿ ರಾಜ್ಯಗೃಹ ಇದೆ. ೧೮ ರಿಂದ ೩೫ ವರ್ಷದವರಿಗೆ ವಸತಿಸೌಲಭ್ಯ ಮತ್ತು ವೃತ್ತಿಪರ ತರಬೇತಿಯನ್ನು ಕೊಡುತ್ತಿದ್ದೇವೆ. ಈ ಕಾರ್ಯಕ್ರಮವನ್ನು ಹೆಚ್ಚಿಗ ಮಾಡಬೇಕೆಂದು ಮಾನ್ಯ ಸದಸ್ಯರ ಅಭಿಪ್ರಾಯ ಇದೆ. ಸರ್ಕಾರ ಅದರ ಬಗ್ಗೆ ಹೆಚ್ಚಿನ ಗಮನ ಹರಿಸಿದೆ. ಈ ವರ್ಷ ಇನ್ನೂ ಕೆಲವು ಕಡೆ ಮಾಡಬೇಕೆಂದು ಮಾಡಿದ್ದೇವೆ, ಈಗ ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಇದು ಕಡಿಮೆ ಎಂದು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಈ ಕಾರ್ಯಕ್ರಮದ ಜೊತೆಗೆ ವಿವಿಧ ಕಾರ್ಯಕ್ರಮಗಳು, ಜನತಾ ಮನೆ, ಭಾಗ್ಯ ಜ್ಯೋತಿ, ಐ. ಆರ್. ಡಿ. ಪಿ. ವೃದ್ಧಾಪ್ಯವೇತನ ಇತ್ಯಾದಿ ಅನೇಕ ಕಾರ್ಯಕ್ರಮಗಳನ್ನು ಸಹ ಸೇರಿಸಿದ್ದೇನೆ.ಇದಕ್ಕೆಲ್ಲ ಸಹ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರ ಖರ್ಚುಮಾಡುತ್ತದೆ.ಈ ದೇವದಾಸಿ ಪದ್ಧತಿ ಅನಿಷ್ಟ ಪದ್ಧತಿ ಇದನ್ನು ಹೋಗಲಾಡಿಸುವುದಕ್ಕೆ ಉಗ್ರವಾದ ಶಾಸನವನ್ನು ತಂದಿದ್ದೇವೆ. ತಿದ್ದುಪಡಿಯಾದ ಶಾಸನ ೮೪ರಿಂದ ಬಂದಿದೆ. ಈಶಾಸನದ ಪ್ರಕಾರ ದೇವದಾಸಿ ಪದ್ಧತಿ ಆಚರಣೆ ಕಾನೂನು ಬಾಹಿರ ಮತ್ತು ಅದು ಶಿಕ್ಷಾರ್ಹ. ಇಂತಹ ಪ್ರಕರಣಗಳಲ್ಲಿ ಭಾಗಿಯಾಗಲೂ ಪ್ರೇರೇಪಿಸಿದವರಿಗೆ ಮೂರು ವರ್ಷ ಜೈಲು ಮತ್ತು ಎರಡು ಸಾವಿರ ರೂಪಾಯಿ ದಂಡ ಎಂದು ಇದೆ. ಇದನ್ನು ಕಠಿಣವಾಗಿ ಆಚರಣೆಗೆ ತರುತ್ತಿದ್ದೇವೆ. ಸಂಬಂಧಿಕರು ಮತ್ತು ತಂದೆತಾಯಿಗಳು ಇದಕ್ಕೆ ಭಾಗ ವಹಿಸಿದರೆ ಐದು ಸಾವಿರ ರೂಪಾಯಿ ದಂಡ ಮತ್ತು ಐದು ವರ್ಷ ಜೈಲು ವಿಧಿಸುವ ಕಾರ್ಯ ಕ್ರಮ ಕೈಗೊಂಡಿದ್ದೇವೆ. ಆದ್ದರಿಂದ ಈ ರೀತಿ ತಮ್ಮ ಕಳಕಳಿ ಏನಿದೆ, ಅವರಿಗೆ ಹೆಚ್ಚಿನ ಪ್ರೋತ್ಸಾಹ, ಸಹಾಯ ದೊರೆಯಬೇಕು ಎಂಬುದು. ಸರ್ಕಾರಕ್ಕೂ ಸಹ ಇವರ ಬಗ್ಗೆ ಅಷ್ಟೇ ಕಳಕಳಿಯಿದೆ. ಸಧ್ಯದಲ್ಲೇ ''ವುಮನ್ ಡೆವಲಪ್‌ಮೆಂಟ್ ಕಾರ್ಪೊರೇಷನ್'' ಅಸ್ತಿತ್ವಕ್ಕೆ ಬರಲಿದ್ದು ಇವರ ಸಂಪೂರ್ಣ ಜವಾಬ್ದಾರಿಯನ್ನು ಅವರು ವಹಿಸುತ್ತಾರೆ.

ಸರ್ಕಾರದಿಂದ ಪ್ರಾಥಮಿಕ ಸಹಕಾರ ಸಂಘಗಳಿಗೆ ಬಡ್ಡಿ ರಿಯಾಯಿತಿ ಮೂಲಕ ಬರಬೇಕಾದ ಬಾಕಿ ಹಣದ ಬಗ್ಗೆ

೨೩೧೭. ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬–೮೭ ಮತ್ತು ೧೯೮೭–೮೮ ನೇ ಸಾಲಿನಲ್ಲಿ ಸರ್ಕಾರದಿಂದ ಪ್ರಾಥಮಿಕ ಸಹಕಾರ ಸಂಘಗಳಿಗೆ ಬಡ್ಡಿ ರಿಯಾಯಿತಿ ಮೂಲಕ ಬರಬೇಕಾದ ಬಾಕಿ ಹಣವೆಷ್ಟು?

ಆ) ಈ ಹಣವನ್ನು ಯಾವಾಗ ಪಾವತಿ ಮಾಡಲಾಗುವುದು?

ಶ್ರೀ ಹೆಚ್. ವಿಶ್ವನಾಥಯ್ಯ (ಸಹಕಾರ ಸಚಿವರು).—

ಅ) ೧೯೮೬-೮೭ನೇ ಸಾಲಿಗಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ರೂ. ೪೨೧.೧೯ ಲಕ್ಷಗಳ ಸಹಾಯ ಧನದ ಮೊತ್ತಕ್ಕೆ ಬೇಡಿಕೆ ಬಂದಿದೆ. ೧೯೮೭–೮೮ನೇ ಸಾಲಿನ ಚಾಲ್ತಿ ಸಾಲಗಳ ವಸೂಲಾತಿಯ ಕಾರ್ಯವು ೩೦–೬–೮೮ರವರೆಗೆ ನಡೆಯುವುದಿದ್ದು ಬಡ್ಡಿ ಸಹಾಯಧನದ ಮಾಹಿತಿ ಇನ್ನೂ ಲಭ್ಯವಿಲ್ಲ.

ಆ) ಬಡ್ಡಿ ರಿಯಾಯಿತಿ ಧನವನ್ನು ಆದಷ್ಟು ಬೇಗ ಸಹಕಾರಿ ಸಂಸ್ಥೆಗಳಿಗೆ ತುಂಬಿಕೊಡುವುದು ಸರ್ಕಾರದ ಉದ್ದೇಶವಾಗಿದೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಈ 'ಆದಷ್ಟು ಬೇಗ' ಎಂದರೆ ಇದರ ಮಿತಿ ಎಷ್ಟು ಎಂಬುದನ್ನು ದಯವಿಟ್ಟು ಅವರು ತಿಳಿಸಬೇಕು. ಬಡ್ಡಿ ರಿಯಾಯಿತಿ ಪಾವತಿಗೆ ಒಂದು ವರ್ಷ, ಎರಡು ವರ್ಷ ತಡವಾದರೆ ಪ್ರಾಥಮಿಕ ಸಹಕಾರಸಂಘಗಳ ಗತಿ ಏನು? ೧೯೮೭–೮೮ರ ವಸೂಲಿಯಲ್ಲಿ ಡಿ. ಸಿ. ಸಿ. ಬ್ಯಾಂಕ್‌ಗೆ ಪ್ರಾಥಮಿಕ ಸಂಘಗಳು ಬಡ್ಡಿ ಕೊಡಬಾರದೆಂದು ಆದೇಶ ಇದೆ ಆದರೆ ಡಿ. ಸಿ. ಸಿ. ಬ್ಯಾಂಕ್‌ನವರು ಅಪೆಕ್ಸ್ ಬ್ಯಾಂಕ್‌ಗೆ ಕೊಡಬೇಕು ಅಪೆಕ್ಸ್ ಬ್ಯಾಂಕ್‌ನವರಂ ನಬಾರ್ಡಿಗೆ ಕೊಡಬೇಕು, ಇದರಿಂದಾಗಿ ಸಹಕಾರ ಸಂಘಗಳ ಮೇಲೆ ಆಗುವ ದುಷ್ಪರಿಣಾಮವನ್ನು ನಿವಾರಿಸಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ?